**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 26/2019
ಪಿಡಬ್ಲು :1 ಸಿಡಬ್ಲು :1

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಹೆಚ್.ನಾಗಭೂಷನ |
| ತಂದೆಯ ಹೆಸರು | : ಶ್ರೀ ಹೊಂಗಯ್ಯ |
| ವಯಸ್ಸು | : 46 ವರ್ಷ |
| ಉದ್ಯೋಗ | : ಆರಕ್ಷಕ ಅಧೀಕ್ಷಕರು ಲೋಕಾಯುಕ್ತ ಬೆಂಗಳೂರು |
| ವಾಸ್ತವ್ಯ | : ಬೆಂಗಳೂರು |
| ದಿನಾಂಕ | : 29-12-2022 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 2012 ರಿಂದ 2020 ರ ವರೆಗೆ ಆರಕ್ಷಕ ಉಪಾಧೀಕ್ಷಕನಾಗಿ ವಿಶೇಷ ವಿಚಾರಣಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 12.11.2016 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಚಿಂಚಣಿ ಗ್ರಾಮದಲ್ಲಿ ಪಾಂಡುರಂಗ ಅಣ್ಣಪ್ಪಾ ಅಪ್ಪಾಜಿಗೋಳ ಎಂಬುವವರ ಜಮೀನಿನಲ್ಲಿ ವಾಸವಾದ ಜೀತ ಕಾರ್ಮಿಕರನ್ನು ಉದ್ಯೋಗಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಬಂದ ಮೇರೆಗೆ ನಾನು ನಮ್ಮ ಸಿಬ್ಬಂದಿಯವರೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಹೋಗಿ ಅವರನ್ನು ರಕ್ಷಿಸಿ ಸದರಿ ಸ್ಥಳದ ಪಂಚನಾಮೆ ಮಾಡಿದೆನು. ಸದರಿ ಸ್ಥಳದಲ್ಲಿ ಒಟ್ಟು 33 ಜೀತದಾಳುಗಳಿದ್ದು, ಅದರಲ್ಲಿ 23 ಗಂಡಸರು, 8 ಮಹಿಳೆಯರು, 5 ಮತ್ತು 6 ವರ್ಷದ ಇಬ್ಬರು ಮಕ್ಕಳು ಇದ್ದರು. ಅವರನ್ನು ಬಳಸಿಕೊಳ್ಳುತ್ತಿದ್ದ 1 ನೇ ಆರೋಪಿ ಸೂರ್ಯ @ ಗದ್ದಾಮ ಎಂಬುವವರನ್ನು ವಶಕ್ಕೆ ಪಡೆದುಕೊಂಡೆನು. ಸದರಿ ಆರೋಪಿ ಅದೇ ಜಮೀನಿನಲ್ಲಿ ವಾಸವಾಗಿದ್ದ. ಸದರಿ ಜೀತದಾಳುಗಳನ್ನು ರಕ್ಷಿಸಿದ ನಂತರ ಚಿಕ್ಕೋಡಿ ಪೋಲೀಸ ಠಾಣೆಗೆ ದೂರನ್ನು ನೀಡಿರುತ್ತೇನೆ. ನಾನು ಒಟ್ಟು 4 ಆರೋಪಿತರು ಅಂದರೆ ಆರೋಪಿ 1 ಸೂರ್ಯ, ಆರೋಪಿ 2 ಗದ್ದಾಮ ರಂಗಯ್ಯ, ಆರೋಪಿ 3 ವೇಮೂಲ ಬಾದಶಾ, ಆರೋಪಿ 4 ಅಶೋಕ ರೆಡ್ಡಿ ಇವರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ. ನಾನು ಈಗ ಸದರಿ ದೂರನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 ಎ ಎಂದು

ಗುರುತಿಸಲಾಯಿತು.

3. ಸದರಿ ಸ್ಥಳದಲ್ಲಿ ಪಂಚರಾದ ಚಾಸಾಃ 3 ದೀಪಾ ಕಾಂಬಳೆ, ಚಾಸಾಃ 2 ತೀರ್ಥಬಾಬು ಅವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಾನು ಈಗ ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು.

4. ನಮಗೆ ಆಂಧ್ರ ರಾಜ್ಯದ ಎನ್.ಜಿ.ಓ ಗಳ ಮುಖಾಂತರ ಆರೋಪಿತರು ಜೀತದಾಳುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಸದರಿ ಎನ್.ಜಿ.ಓ ಗೆ ಸಂಬಂಧಿಸಿದ ವಾಸುದೇವರಾವ, ಕೆ.ಸುಭಾಶ, ಶ್ರೀಮತಿ ಮಾಧವಿ ಲತಾ, ಚಾಸಾಃ 46 ಬೃಂದಾದರ ಯಡ್ಲಪಲ್ಲಿ ಎಂಬ ವಕೀಲರು ಸಹ ಪಂಚನಾಮೆಯ ಸಮಯದಲ್ಲಿ ಹಾಜರು ಇದ್ದರು. ನಾನು ಅಲ್ಲಿ ಯಾರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

**ಪಾಟೀ ಸವಾಲು: ಶ್ರೀ. ಬಿ ಜೆ ಜಿ ವಕೀಲರಿಂದ ಆರೋಪಿತನ ಪರವಾಗಿ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಯಾವುದೇ ಸಕಾರಣ ನೀಡದ ಕಾರಣ ಈ ಸಾಕ್ಷಿಗೆ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ಸವಾಲು ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.